# ರಿಯಲ್ ಬಾದ್‌ಷಾ!



ಶಾರೂಕ್ ಖಾನ್ ನಿಜಕ್ಕೂ 'ಬಾಲಿವುಡ್ ಬಾದ್‌ಷಾ' ಎನ್ನೋದರಲ್ಲಿ ಎರಡು ಮಾತಿಲ್ಲ. ತನ್ನ ಹೊಸ ಸಿನಿಮಾ 'ರಾ ಒನ್' ಬಿಡುಗಡೆಯ ದಿನಾಂಕವನ್ನು ನಾಲ್ಕು ತಿಂಗಳು ಮುಂಚೆಯೇ ಪ್ರಕಟಿಸಿದ್ದಾನೆ ಶಾರೂಕ್! ಅಕ್ಟೋಬರ್ 26ರಂದು ದೀಪಾವಳಿ ಸಂದರ್ಭದಲ್ಲಿ 'ರಾ ಒನ್' ಬಿಡುಗಡೆ ಆಗಲಿದೆಯಂತೆ. ಅದಕ್ಕಾಗಿ ಈಗಿನಿಂದಲೇ ಶಾರೂಕ್ ಸಿದ್ಧತೆಯಲ್ಲಿ ತೊಡಗಿದ್ದಾನೆ. ಆತನ ಸಿನಿಮಾ ಬಿಡುಗಡೆಯ ವಾರದಲ್ಲಿ ಬಾಲಿವುಡ್‌ನ ಬೇರೆ ಯಾವ ನಿರ್ಮಾಪಕರೂ ತಮ್ಮ ಸಿನಿಮಾ ಬಿಡುಗಡೆ ಮಾಡಲು ಸಿದ್ಧರಿಲ್ಲ!

ಆದರೆ ಗಾಯಕ– ನಾಯಕ ಹಿಮೇಶ್ ರೇಶಮಿಯಾ ಮಾತ್ರ 'ಬಾದ್‌ಷಾ ದಾಳಿ'ಗೆ ಅಂಜಿಲ್ಲ. ಹಿಮೇಶ್ ನಾಯಕನಾಗಿ ನಟಿಸಿರುವ ಹೊಸ ಚಿತ್ರ 'ದಮ್ಮಾದಮ್' ಕೂಡಾ ಅದೇ ವೇಳೆ ಬಿಡುಗಡೆಯಾಗಲಿದೆ! 'ಚಿತ್ರ ಚೆನ್ನಾಗಿ ಓಡಿದರೆ ಹೆಸರು ಬಂದೇ ಬರುತ್ತದೆ; ಓಡದಿದ್ದರೆ ಸೋಲಿನ ಕಾರಣವನ್ನು ಶಾರೂಕ್ ಚಿತ್ರದ ಮೇಲೆ ಎತ್ತಿ ಹಾಕಬಹುದು' ಎನ್ನೋದು ಹಿಮೇಶ್ ಪ್ಲಾನ್ ಇರಬಹುದು!

ಶಾರೂಕ್‌ನ ಹೊಸ ಚಿತ್ರ ದೇಶದಾದ್ಯಂತ 3000 ಸ್ಕ್ರೀನ್‌ಗಳಲ್ಲಿ ಬಿಡುಗಡೆ ಕಾಣಲಿದೆಯಂತೆ. ಅದಕ್ಕಾಗಿ 2000 ಪ್ರಿಂಟ್‌ಗಳನ್ನು ಹಾಕಲಾಗುವುದಂತೆ! ಬಾಲಿವುಡ್ ಮಟ್ಟಿಗೆ ಈ ಸಂಖ್ಯೆ ಹೊಸ ದಾಖಲೆಯೇ. ಚಿತ್ರದ ಬಿಡುಗಡೆಯ ಸುದ್ದಿ ಭರಾಟೆ ಎಷ್ಟಿದೆಯೆಂದರೆ, ಅದೇ ದಿನ ಬಿಡುಗಡೆಯಾಗಬೇಕಿದ್ದ ಸಂಜಯ್ ದತ್– ಅಜಯ್ ದೇವಗನ್ ತಾರಾಗಣದ 'ರ್‍ಯಾಸ್ಕಲ್ಸ್' ಚಿತ್ರದ ಬಿಡುಗಡೆಯನ್ನೂ ನಿರ್ಮಾಪಕರು ಮುಂದೂಡಿದ್ದಾರಂತೆ. 'ರಿಯಲ್ ಬಾದ್‌ಷಾ' ಖದರು ಅಂದರೆ ಇದೇ ಇರಬೇಕು!



# ಮಲ್ಲಿಕಾ ಅಮೆರಿಕಾ!

'ಡಬಲ್ ಧಮಾಲ್' ಚಿತ್ರ ತೆರೆಗಪ್ಪಳಿಸಿದೆ. ಚಿತ್ರದ ನಾಯಕಿ ಮಲ್ಲಿಕಾ ಶೆರಾವತ್‌ಳ ಭರ್ಜರಿ ಪ್ರಚಾರ ಪಡೆದ 'ಶಾಲೂ..' ಹಾಡು ಠುಸ್ಸೆಂದಿದೆ! ಚಿತ್ರ ಬಿಡುಗಡೆಗೆ ಮುನ್ನ ಈ ಹಾಡಿನ ಬಗ್ಗೆ ಪತ್ರಕರ್ತರು ರೀಮುಗಟ್ಟಳೆ ಬರೆದಿದ್ದರು. ಈ ಹಾಡು ಮಲ್ಲಿಕಾ ಆರೋರಾಳ 'ಮುನ್ನಿ ಬದ್‌ನಾಮ್..' ಹಾಡು ಮತ್ತು ಕತ್ರೀನಾ ಕೈಫ್‌ಳ 'ಶೀಲಾ ಕಿ ಜವಾನಿ' ಹಾಡಿಗೆ ಭಾರೀ ಸ್ಪರ್ಧೆ ಒಡ್ಡಲಿದೆ ಎನ್ನುವ ಮಾತುಗಳೆಲ್ಲ ಕೇಳಿಬಂದಿದ್ದವು. ಆದರೆ ಹಾಡಿನಲ್ಲಿ ಮಲ್ಲಿಕಾಳ ಎಂದಿನ ಕನಿಷ್ಠ ಕಾಸ್ಟ್ಯೂಮ್ ಬಿಟ್ಟರೆ ನೆನಪಿಡುವಂತದ್ದು ಬೇರೇನೂ ಇಲ್ಲ ಎನ್ನುವುದು ಬಯಲಾಗಿದೆ. ಚಿತ್ರದ ನಿರ್ದೇಶಕ ಇಂದ್ರಕುಮಾರ್ ಹಾಡಿನ ಶೂಟಿಂಗ್ ವೇಳೆ ಮಲ್ಲಿಕಾ ಸಹಿತ ಎಲ್ಲರಿಗೆ ಪ್ರತಿದಿನ 25 ಕೆ.ಜಿ ಜಿಲೇಬಿ ತಂದು ತಿನ್ನಿಸಿದ್ದೂ ವ್ಯರ್ಥವಾದಂತಿದೆ!

ಮಲ್ಲಿಕಾ ಮಾತ್ರ ಇದರಿಂದ ಎದೆಗುಂದಿಲ್ಲ. ಆಕೆಯೀಗ ಶೀಘ್ರವೇ ಬಿಡುಗಡೆ ಆಗಲಿರುವ ತನ್ನ ಇಂಗ್ಲಿಷ್ ಚಿತ್ರ 'ಪಾಲಿಟಿಕ್ಸ್ ಆಫ್ ಲವ್' ಬಗ್ಗೆ ಹೆಚ್ಚು ಹೆಚ್ಚು ಮಾತನಾಡುತ್ತಿದ್ದಾಳೆ. 'ವಾಷಿಂಗ್ಟನ್‌ನಲ್ಲಿ ಈ ಚಿತ್ರದ ಪ್ರೀಮಿಯರ್ ಷೋ ನಡೆಯಲಿದೆ. ಅಮೆರಿಕದ ಅಧ್ಯಕ್ಷರಾದ ಬರಾಕ್ ಒಬಾಮಾ ಅವರು ಷೋ ನೋಡಲು ಉತ್ಸುಕತೆ ತೋರಿಸಿದ್ದಾರೆ' ಎಂದು ಮಲ್ಲಿಕಾ ಹೇಳಿದ್ದಾಳೆ. ಈಗಾಗಲೆ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಸನ್ಮಾನ ಮಾಡಿಸಿಕೊಂಡು, ಲಾಸ್ ಏಂಜಲೀಸ್‌ನಲ್ಲಿ ಗೌರವ ಪೌರತ್ವ ಪಡೆದುಕೊಂಡಿರುವ ಮಲ್ಲಿಕಾ, ಮುಂದಿನ ಚುನಾವಣೆಯಲ್ಲಿ ಬರಾಕ್ ಒಬಾಮಾ ಪರ ಪ್ರಚಾರ ಮಾಡಲೂ ಸಿದ್ಧಳಿದ್ದಾಳಂತೆ!

■ ಬಿಂದು